# ಕಾನೂನು ಕಿರಣ
# KANOONU KIRANA

**ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯ ಕಾನೂನು ಸಾಕ್ಷರತಾ ಪತ್ರಿಕೆ**

**ಸಾರ್ವಜನಿಕ ಹಿತಾಸಕ್ತಿಯಲ್ಲಿ * ಖಾಸಗಿ ಪ್ರಸಾರಕ್ಕೆ ಮಾತ್ರ**

**LEGAL LITERACY NEWS LETTER OF KARNATAKA STATE LAW UNIVERSITY, HUBBALLI**

ಹುಬ್ಬಳ್ಳಿ | ಜುಲೈ- 2019 | ಪುಟ-4


## ಮಾನವ ಹಕ್ಕು ರಕ್ಷಿಸುವ ಹೊಣೆ ಸರ್ಕಾರದ್ದು – ಮುಖ್ಯ ನ್ಯಾಯಮೂರ್ತಿ ಡಾ. ಎಸ್. ರಾಜೇಂದ್ರಬಾಬು

ಭಯೋತ್ಪಾದನೆ ಜಾಗತಿಕವಾಗಿ ವ್ಯಾಪಿಸಿ ಕೊಂಡಿದೆ. ಇದರಿಂದ ಆರ್ಥಿಕ ವ್ಯವಸ್ಥೆ, ನಾಗರಿಕ ಸಮಾಜ ಹಾಗೂ ಅಭಿವೃದ್ಧಿಗೆ ಆತಂಕ ಎದುರಾಗಿ, ಮಾನವ ಹಕ್ಕುಗಳ ಮೇಲೆ ಭೀಕರ ಪರಿಣಾಮ ಉಂಟಾಗುತ್ತಿದೆ. ಭಯೋತ್ಪಾದನೆಯನ್ನು ತಡೆದು ಮಾನವ ಹಕ್ಕುಗಳನ್ನು ರಕ್ಷಿಸುವ ಹೊಣೆಗಾರಿಕೆ ಸರ್ಕಾರದ ಮೇಲಿದೆ ಎಂದು ಸುಪ್ರೀಂಕೋರ್ಟ್‌ನ ವಿಶ್ರಾಂತ ಮುಖ್ಯ ನ್ಯಾಯಮೂರ್ತಿ ಡಾ.ಎಸ್. ರಾಜೇಂದ್ರಬಾಬುರವರು ದಿನಾಂಕ 30.04.2019 ರಂದು ಕರ್ನಾಟಕ ರಾಜ್ಯ ಕಾನೂನು ವಿಶ್ವ ವಿದ್ಯಾಲಯ, ಹುಬ್ಬಳ್ಳಿ ಮತ್ತು ಆರ್. ಎಲ್. ಕಾನೂನು ಮಹಾವಿದ್ಯಾಲಯ, ದಾವಣಗೆರೆಯ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ದಶಮಾನೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ "ಭಯೋತ್ಪಾದನೆ ಮಾನವ ಹಕ್ಕುಗಳಿಗೆ ಮಾರಕ" ಎಂಬ ವಿಷಯದ ಮೇಲೆ ಉಪನ್ಯಾಸವನ್ನು ನೀಡುತ್ತ ಅಭಿಪ್ರಾಯ ಪಟ್ಟರು. ಭಯೋತ್ಪಾದನೆಯ ಇತಿಹಾಸವನ್ನು ತಿರುವಿ ನೋಡಿದಾಗ, ಅವರ ವಿರುದ್ಧವೇ ಪರಿಣಾಮ ಆಗಿರುವುದು ಕಂಡುಬಂದಿದೆ. ಭಯೋತ್ಪಾದಕರು ಆತ್ಮಾಹುತಿ ಮಾಡಿಕೊಂಡು ತಾವೇ ನಾಶವಾಗುತ್ತಿದ್ದಾರೆ. ಉಗ್ರವಾದಿಗಳೇ ಅಂತಿಮವಾಗಿ ಬಲಿಪಶುಗಳಾಗುತ್ತಿದ್ದಾರೆ. ರಾಜಕೀಯ ಉದ್ದೇಶ ಈಡೇರಿಸಿಕೊಳ್ಳಲು ಭಯೋತ್ಪಾದನೆ ಬಳಕೆಯಾಗುತ್ತಿದೆ, ಸರಕಾರದ ಬೆಂಬಲ ಪಡೆದ ಉಗ್ರವಾದ ಅತ್ಯಂತ ಕೆಡುಕಿನದ್ದಾಗಿರುತ್ತದೆ. ಇಂಥ




ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ದಶಮಾನೋತ್ಸವದ ಅಂಗವಾಗಿ ದಿನಾಂಕ 30.04.2019ರಂದು ಹಮ್ಮಿಕೊಂಡಿದ್ದ "ಭಯೋತ್ಪಾದನೆ ಮಾನವ ಹಕ್ಕುಗಳಿಗೆ ಮಾರಕ" ಎಂಬ ವಿಷಯದ ಮೇಲೆ ಉಪನ್ಯಾಸ ಕಾರ್ಯಕ್ರಮದ ಉದ್ಘಾಟನೆ. ಚಿತ್ರದಲ್ಲಿ ಸುಪ್ರೀಂ ಕೋರ್ಟ್‌ನ ವಿಶ್ರಾಂತ ಮುಖ್ಯ ನ್ಯಾಯಮೂರ್ತಿಗಳಾದ ಡಾ. ಎಸ್. ರಾಜೇಂದ್ರಬಾಬುರವರು, ಕರಾಕಾವಿಯ ಗೌರವಾನ್ವಿತ ಕುಲಪತಿಗಳಾದ ಪ್ರೊ. (ಡಾ.) ಈಶ್ವರ ಭಟ್‌ರವರು ಹಾಗೂ ಇತರ ಗಣ್ಯರು ಉಪಸ್ಥಿತರಿರುವರು.

ಕೃತ್ಯಗಳು ಸಮಾಜದ ಸ್ವಾಸ್ಥ್ಯವನ್ನು ಕದಡುತ್ತವೆ. ಇತ್ತೀಚಿಗೆ ಶ್ರೀಲಂಕಾ ಮತ್ತು ನ್ಯೂಜಿಲ್ಯಾಂಡ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗಳು ಉತ್ತಮ ಉದಾಹರಣೆಯಾಗಿವೆ ಎಂದರು.

ಮನುಷ್ಯನ ಹುಟ್ಟಿನೊಂದಿಗೆ ಮಾನವ ಹಕ್ಕುಗಳು ಬಂದಿರುತ್ತವೆ. ಹಾಗಾಗಿ ಬಣ್ಣ, ಲಿಂಗ, ಜಾತಿಯ ನೆಲೆಗಟ್ಟಿನಲ್ಲಿ ಮನುಷ್ಯನನ್ನು ನೋಡದೇ ಪ್ರತಿಯೊಬ್ಬರನ್ನು ಸಮಾನವಾಗಿ ನೋಡುವ ಮತ್ತು ಗೌರವಿಸುವ ಮನೋಭಾವವನ್ನು ಬೆಳೆಸಿಕೊಂಡಾಗ ಮಾತ್ರ ಮಾನವ ಹಕ್ಕುಗಳನ್ನು ಕಾಪಾಡಿದಂತಾಗುತ್ತದೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್. ಬಿಲ್ಲಪ್ಪ ಹೇಳಿದರು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.(ಡಾ.) ಈಶ್ವರ ಭಟ್ ಮಾತನಾಡುತ್ತ, ಅಮೇರಿಕದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಂಡಿರುವುದರಿಂದ ಅಲ್ಲಿ ಭಯೋತ್ಪಾದನೆ ಮರುಕಳಿಸುತ್ತಿಲ್ಲ, ಹೀಗಾಗಿ ಭಯೋತ್ಪಾದನೆಯನ್ನು ನಿಯಂತ್ರಿಸಲು ದೇಶ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದರು. ಕಾರ್ಯಕ್ರಮದ ಗಣ್ಯರನ್ನು ಪ್ರೊ. (ಡಾ.) ಬಿ. ಎಸ್. ರೆಡ್ಡಿ, ಪ್ರಾಂಶುಪಾಲರು, ಆರ್.ಎಲ್. ಕಾನೂನು ಮಹಾವಿದ್ಯಾಲಯ, ದಾವಣಗೆರೆ ಇವರು ಸ್ವಾಗತಿಸಿದರು ಮತ್ತು ಶ್ರೀ.ಎಂ. ಸೋಮಶೇಖರಪ್ಪ, ಸಹಾಯಕ ಪ್ರಾಧ್ಯಾಪಕರು, ಆರ್.ಎಲ್. ಕಾನೂನು ಮಹಾವಿದ್ಯಾಲಯ, ದಾವಣಗೆರೆ ಇವರು ವಂದಿಸಿದರು.

## ಸಂಪಾದಕೀಯ

ನಮ್ಮ ಕಾನೂನು ವ್ಯವಸ್ಥೆಯ ಕಾರ್ಯಚರಣೆಯು ನ್ಯಾಯಸಾಧನೆಗೆ ದಾರಿಯಾಗಬೇಕೆಂದೂ, ರಾಜ್ಯವು ಸರ್ವರಿಗೂ ಸಮಾನ ನ್ಯಾಯವನ್ನು ಒದಗಿಸುವ ಹೊಣೆಗಾರಿಕೆಯನ್ನು ಹೊತ್ತಿದೆಯೆಂದೂ ಹೇಳುವ ಸಾಂವಿಧಾನಿಕ ನಿರ್ದೇಶನದ (ಅನುಚ್ಛೇದ 39 A) ಇಂಗಿತವು ಕಾನೂನಿಗೂ ನ್ಯಾಯಕ್ಕೂ ಇರುವ ಸಂಬಂಧವನ್ನು ಸ್ಪಷ್ಟಗೊಳಿಸುವುದಲ್ಲದೆ ಕಾನೂನು ನೆರವಿನ ಧೋರಣೆಯ ತಿರುಳು ಕೂಡಾ ಆಗಿದೆ. ಜನಸಾಮಾನ್ಯರಲ್ಲಿ ಕಾನೂನಿನ ಅರಿವು ಮೂಡಿಸುವುದು ಕಾನೂನು ನೆರವು ಕಾರ್ಯಕ್ರಮದ ಅನಿವಾರ್ಯ ಭಾಗವಾಗಿದೆ. ಕಾನೂನು ನೆರವು ಕೇಂದ್ರ (legal aid clinic) ಮತ್ತು ಕಾನೂನು ಸಾಕ್ಷರತಾ ಆಂದೋಲನದ ಮೂಲಕ ಕಾನೂನು ವಿದ್ಯಾರ್ಥಿಗಳು ತಮ್ಮನ್ನು ತಾವು ಸಾಮುದಾಯಿಕ ಪ್ರಯತ್ನಗಳಲ್ಲಿ ತೊಡಗಿಸಿಕೊಳ್ಳುವುದು ಕಾನೂನಿನ ಸಾಮಾಜಿಕ ಪ್ರಸ್ತುತತೆಯನ್ನು, ಸುಖೀ ಪ್ರಜಾಪ್ರಭುತ್ವದ ಆಯಾಮವನ್ನು ಹಾಗೂ ಕಾನೂನು ಕಾರ್ಯಾಚರಣೆಯ ಪ್ರಕ್ರಿಯೆಯನ್ನು ಅರಿತುಕೊಳಲು ಬಹಳಷ್ಟು ಸಹಾಯವಾಗುತ್ತವೆ. ಕಾನೂನು ಸೇವಾ ಪ್ರಾಧಿಕಾರ ಹಾಗೂ ಸಮಾಜ ಸೇವಾಸಕ್ತ ಸಂಘಟನೆಗಳೊಂದಿಗೆ ಪಾಲುಗಾರಿಕೆಯಿಂದ ಕಾರ್ಯ ನಿರ್ವಹಿಸುವುದು ವಿದ್ಯಾರ್ಥಿಗಳ ಕೌಶಲ್ಯವರ್ಧನೆಗೂ ಅವಕಾಶ ಮಾಡಿಕೊಡುತ್ತದೆ.

ಮೇಲಿನ ಧ್ಯೇಯಕ್ಕೆ ಪೂರಕವಾಗಿರುವ ಹಾಗೂ ಸಾರ್ವಜನಿಕರಿಗೆ ಕಾನೂನು ಮಾಹಿತಿಯನ್ನು ಪ್ರಸರಿಸುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ **'ಕಾನೂನು ಕಿರಣ'** 2019ನೇ ಇಸವಿಯ ಜುಲೈ ಸಂಚಿಕೆ ನಿಮ್ಮ ಮುಂದಿದೆ. ಈ ಸಾಕ್ಷರತಾ ಪತ್ರಿಕೆಯ ಗುಣಮಟ್ಟವನ್ನು ಮತ್ತಷ್ಟು ಹೆಚ್ಚಿಸಲು ಹಾಗೂ ವಿಶ್ವವಿದ್ಯಾಲಯದ ಕಾನೂನು ಸಾಕ್ಷರತಾ/ ನೆರವು ಕಾರ್ಯಕ್ರಮಗಳನ್ನು ಹೆಚ್ಚು ಅರ್ಥಪೂರ್ಣವಾಗಿ ಮಾಡಲು ನಿಮ್ಮ ಸಲಹೆಗೆ ಸ್ವಾಗತ.

**ನಿಮ್ಮ ವಿಶ್ವಾಸಿ,**
**ಪ್ರೊ. (ಡಾ.) ಪಿ. ಈಶ್ವರ ಭಟ್**
ಕುಲಪತಿಗಳು, ಕರಾಕಾವಿ, ನವನಗರ, ಹುಬ್ಬಳ್ಳಿ.


### ಸಂಪಾದಕೀಯ ಮಂಡಳ

**ಪ್ರೊ. (ಡಾ.) ಪಿ. ಈಶ್ವರ ಭಟ್** — **ಪೋಷಕರು**
ಕುಲಪತಿಗಳು
ಕರಾಕಾವಿ, ಹುಬ್ಬಳ್ಳಿ.

**ಪ್ರೊ. ಡಾ. ಸಿ. ಎಸ್. ಪಾಟೀಲ** — **ಸಲಹೆಗಾರರು**
ಡೀನ್ ಮತ್ತು ನಿರ್ದೇಶಕರು,
ಕರಾಕಾವಿ ಕಾನೂನು ಶಾಲೆ, ಹುಬ್ಬಳ್ಳಿ.

**ಶ್ರೀ ಆರ್. ರವಿಶಂಕರ** ಭಾ.ಆ.ಸೇ. — **ಸಲಹೆಗಾರರು**
ಕುಲಸಚಿವರು
ಕರಾಕಾವಿ, ಹುಬ್ಬಳ್ಳಿ.

**ಡಾ. ಜಿ. ಬಿ. ಪಾಟೀಲ** — **ಸಲಹೆಗಾರರು**
ಕುಲಸಚಿವರು ಮೌಲ್ಯಮಾಪನ (ಪ್ರಭಾರ),
ಕರಾಕಾವಿ, ಹುಬ್ಬಳ್ಳಿ.

**ಡಾ. ಭೀಮಾಬಾಯಿ ಎಸ್. ಮೂಲಗೆ** — **ಸದಸ್ಯರು**
ಸಹಾಯಕ ಪ್ರಾಧ್ಯಾಪಕರು,
ಕರಾಕಾವಿ, ಹುಬ್ಬಳ್ಳಿ.

**ಡಾ. ರಂಗಸ್ವಾಮಿ ಡಿ.** — **ಸದಸ್ಯರು**
ಸಹಾಯಕ ಪ್ರಾಧ್ಯಾಪಕರು,
ಕರಾಕಾವಿ, ಹುಬ್ಬಳ್ಳಿ.

**ಶ್ರೀ. ಸುನಿಲ ಬಾಗಡೆ** — **ಸದಸ್ಯರು**
ಸಹಾಯಕ ಪ್ರಾಧ್ಯಾಪಕರು,
ಕರಾಕಾವಿ, ಹುಬ್ಬಳ್ಳಿ.


# ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಮತ್ತು ಕಾನೂನು

## ಭಾಗ-4: ದೇಶೀಯ ಕಾನೂನುಗಳು


–ಪ್ರೊ. (ಡಾ.) ಪಿ. ಈಶ್ವರ ಭಟ್
ಕುಲಪತಿಗಳು,
ಕರಾಕಾವಿ, ನವನಗರ, ಹುಬ್ಬಳ್ಳಿ.


*ಪ್ರಾಚೀನ ಸ್ಮಾರಕಗಳ ಮತ್ತು ಪುರಾತನ ಸ್ಥಳ ಮತ್ತು ಅವಶೇಷಗಳ ಅಧಿನಿಯಮ, 1958* ಹಾಗೂ *ಪುರಾವಶೇಷ ಮತ್ತು ಕಲಾ ಭಂಡಾರ ಅಧಿನಿಯಮ, 1972* ಎಂಬ ಎರಡು ಕೇಂದ್ರ ಶಾಸನಗಳು ಸಂವಿಧಾನದ ಅನುಚ್ಛೇದ 49ರ ಆಶಯವನ್ನು ಪೂರೈಸುವ ಕೆಲಸವನ್ನು ಮಾಡುತ್ತವೆ.

ಈ ಅಧಿನಿಯಮಗಳು ಜಾರಿಗೆ ಬರುವ ಪೂರ್ವದಲ್ಲಿ *ಪ್ರಾಚೀನ ಸ್ಮಾರಕಗಳ ಪಾಲನೆಯ ಅಧಿನಿಯಮ, 1904* ಮತ್ತು *ಪ್ರಾಚೀನ ಹಾಗೂ ಐತಿಹಾಸಿಕ ಸ್ಮಾರಕಗಳ ಮತ್ತು ಪುರಾತನ ಸ್ಥಳ ಮತ್ತು ಅವಶೇಷಗಳ (ರಾಷ್ಟ್ರೀಯ ಮಹತ್ವದ್ದೆಂದು ಘೋಷಿಸುವ) ಅಧಿನಿಯಮ, 1951* ಜಾರಿಯಲ್ಲಿದ್ದವು. 1904ರ ಅಧಿನಿಯಮವು ಕಲೆಕ್ಟರನಿಗೆ ವ್ಯಾಪಕ ಅಧಿಕಾರವನ್ನು ಕೊಟ್ಟಿದ್ದುದರಿಂದ ಕಾನೂನಿನಲ್ಲಿ ಏಕರೂಪತೆಯಿರಲಿಲ್ಲ. 1951ರ ಅಧಿನಿಯಮವು ಬರಿಯ ಪ್ರಾಚೀನ ಹಾಗೂ ಐತಿಹಾಸಿಕ ಸ್ಮಾರಕಗಳ ಮತ್ತು ಪುರಾತನ ಸ್ಥಳ ಮತ್ತು ಅವಶೇಷಗಳನ್ನು ರಾಷ್ಟ್ರೀಯ ಮಹತ್ವದ್ದೆಂದು ಘೋಷಿಸುವ ಪ್ರಕ್ರಿಯೆಗಷ್ಟೇ ಸಂಬಂಧಿಸಿದ್ದಾಗಿತ್ತು. 1956ರಲ್ಲಿ ಸಂವಿಧಾನದ ಅನುಚ್ಛೇದ 49ಕ್ಕೆ ಮಾಡಿದ ತಿದ್ದುಪಡಿಯು ರಾಷ್ಟ್ರೀಯ ಮಹತ್ವವುಳ್ಳದೆಂದು ಘೋಷಿಸಲು ಕಾನೂನು ಮಾಡುವ ಅಧಿಕಾರವನ್ನು ಸಂಸತ್ತಿಗೆ ಮಾತ್ರ ಕೊಟ್ಟಿತು. ಖಾಸಗಿ ವ್ಯಕ್ತಿಗಳ ಮಾಲೀಕತ್ವದಲ್ಲಿರುವ ಪ್ರಾಚೀನ ಸ್ಮಾರಕ ಇತ್ಯಾದಿಗಳ ಬಗ್ಗೆ ಕೇಂದ್ರ ಸರಕಾರವು ಸದರಿ ವ್ಯಕ್ತಿಗಳೊಂದಿಗೆ ಕರಾರು ಮಾಡಿ ಸಂರಕ್ಷಿಸುವ ಕೆಲಸಕ್ಕೆ ಹಲವು ಬಾರಿ ಅವರ ಅಸಹಕಾರದಿಂದ ಅಡಚಣೆಯಾಗುತ್ತಿತ್ತು. ಪುರಾತನ ಸ್ಥಳಗಳಲ್ಲಿ ಉತ್ಖನನ ಮಾಡಿ ಪ್ರಾಕ್ತನ ಅವಶೇಷಗಳನ್ನು ಬೆಳಕಿಗೆ ತರುವ ಕೆಲಸಕ್ಕೂ ಕಾನೂನಿನ ಚೌಕಟ್ಟಿನ ಅನಿವಾರ್ಯವಿತ್ತು. ಪ್ರಾಚೀನ ಸ್ಮಾರಕ ಮತ್ತು ಪುರಾತನ ಸ್ಥಳಗಳ ಸುತ್ತಲೂ ಜಾಗಗಳನ್ನು ರಕ್ಷಿಸುವ ಸಲುವಾಗಿ ಮತ್ತು ಸಂರಕ್ಷಣೆಯ ಒಟ್ಟು ಕೆಲಸವನ್ನು ನಡೆಸಿಕೊಂಡು ಹೋಗುವ ಕಾರ್ಯಕ್ಕಾಗಿ ಅಧಿಕಾರಿಗಳ ವ್ಯವಸ್ಥೆಯನ್ನು ಮಾಡುವುದಕ್ಕೆ ಮತ್ತು ಕೇಂದ್ರ ಸರಕಾರಕ್ಕೆ ಸಮರ್ಪಕ ಶಿಫಾರಸ್ಸು ಮಾಡುವ ಹಾಗೂ ಮೇಲುಸ್ತುವಾರಿ ಮಾಡುವ ಬಗ್ಗೆ ರಾಷ್ಟ್ರೀಯ ಸ್ಮಾರಕಗಳ ಪ್ರಾಧಿಕಾರವನ್ನು ಸ್ಥಾಪಿಸುವುದಕ್ಕೆ ಕಾನೂನಿನ ವಿಧಿಗಳು ಅಗತ್ಯವಿದ್ದವು. ಈ ಕಾರಣಕ್ಕಾಗಿ 1958ರ ಅಧಿನಿಯಮವನ್ನು ಮತ್ತು ಅದಕ್ಕೆ 2010ರಲ್ಲಿ ಸೂಕ್ತ ತಿದ್ದುಪಡಿಗಳನ್ನು ತರಲಾಯಿತು. ಈ ಕಾನೂನಿನ ಮುಖ್ಯ ಧೋರಣೆಗಳನ್ನು ಈ ಕೆಳಗಿನಂತೆ ಪರಿಚಯಿಸಬಹುದು.

**1. ರಾಷ್ಟ್ರೀಯ ಮಹತ್ವದ್ದೆಂಬ ಸ್ಥಾನಮಾನವನ್ನು ನೀಡುವಿಕೆ**

1951ರ ಅಧಿನಿಯಮದಲ್ಲಿ ಅಥವಾ *ರಾಜ್ಯ ಪುನರ್‌ರಚನಾ ಅಧಿನಿಯಮ 1956*ರ ಕಲಂ 126 ರಲ್ಲಿ ರಾಷ್ಟ್ರೀಯ ಮಹತ್ವದ್ದೆಂದು ಘೋಷಿಸಲಾದ ಎಲ್ಲಾ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳನ್ನು ಮತ್ತು ಎಲ್ಲಾ ಪುರಾತನ ಸ್ಥಳ ಮತ್ತು ಅವಶೇಷಗಳನ್ನು 1958ರ ಅಧಿನಿಯಮದ ಅಡಿಯಲ್ಲಿ ಕೂಡಾ ರಾಷ್ಟ್ರೀಯ ಮಹತ್ವದ್ದೆಂದು ತಿಳಿಯತಕ್ಕದ್ದು (ಕಲಂ3). ಇದರ ವ್ಯಾಪ್ತಿಯಲ್ಲಿ ಬಾರದ ಯಾವುದೇ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳನ್ನು ಅಥವಾ ಪುರಾತನ ಸ್ಥಳ ಮತ್ತು ಅವಶೇಷಗಳು ಕೇಂದ್ರ ಸರಕಾರದ ಅಭಿಪ್ರಾಯದಲ್ಲಿ ರಾಷ್ಟ್ರೀಯ ಮಹತ್ವದೆಂದು ಪರಿಗಣಿಸಲ್ಪಟ್ಟಲ್ಲಿ ಕೇಂದ್ರ ಸರಕಾರವು ತನ್ನ ಇಂಗಿತವನ್ನು ವ್ಯಕ್ತಪಡಿಸುವ ಎರಡು ತಿಂಗಳ ಕಾಲಾವಧಿಯ ತಿಳುವಳಿಕೆ ಪತ್ರವನ್ನು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಬಹುದು. ಅಂತಹ ತಿಳುವಳಿಕೆ ಪತ್ರದ ನಕಲನ್ನು ಅಂತಹ ಸ್ಮಾರಕ ಅಥವಾ ಸ್ಥಳ ವ ಅವಶೇಷದ ಸಮೀಪ ನಜರಿಗೆ ಬೀಳುವ ರೀತಿಯಲ್ಲಿ ಹಚ್ಚತಕ್ಕುದು. ಈ ಕುರಿತಾಗಿ ಹಿತಾಸಕ್ತಿಯುಳ್ಳ ಯಾವುದೇ ವ್ಯಕ್ತಿಯು ಸೂಚಿತ ಅವಧಿಯೊಳಗೆ ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಬಹುದು. ಸೂಚಿತ ಅವಧಿಯ ನಂತರ ಕೇಂದ್ರ ಸರಕಾರವು ತನಗೆ ಬಂದಿರುವ ಆಕ್ಷೇಪ ಪತ್ರಗಳನ್ನು ಪರಿಗಣಿಸಿ ಪ್ರಾಚೀನ ಸ್ಮಾರಕ ಅಥವಾ ಪುರಾತನ ಸ್ಥಳ ಮತ್ತು ಅವಶೇಷಗಳನ್ನು ರಾಷ್ಟ್ರೀಯ ಮಹತ್ವದ್ದೆಂದು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿ ಘೋಷಿಸಬಹುದು (ಕಲಂ 4). ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರದ ಶಿಫಾರಸ್ಸಿನ ಮೇರೆಗೆ ಮೇಲೆ ಹೇಳಿದ ಪ್ರಾಚೀನ ಸ್ಮಾರಕಗಳು ಅಥವಾ ಪುರಾತನ ಸ್ಥಳಗಳು ಹಾಗೂ ಅವಶೇಷಗಳನ್ನು ಸೂಕ್ತ ರೀತಿಯಲ್ಲಿ ವರ್ಗೀಕರಣ ಮಾಡುವ ಅಧಿಕಾರವು ಕೇಂದ್ರ ಸರಕಾರಕ್ಕಿದೆ (ಕಲಂ 4A).

"ಪ್ರಾಚೀನ ಸ್ಮಾರಕ" ಎಂದರೆ ಐತಿಹಾಸಿಕ, ಪ್ರಾಕ್ತನ ಅಥವಾ ಕಲಾತ್ಮಕ ಅಂಶಗಳಿದ್ದು ನೂರು ವರ್ಷಕ್ಕೆ ಕಡಿಮೆಯಿಲ್ಲದಷ್ಟು ಸಮಯದಿಂದಲೂ ಅಸ್ತಿತ್ವದಲ್ಲಿದ್ದ ಕಟ್ಟಡ, ರಚನೆ ಅಥವಾ ಸ್ಮಾರಕ, ಅಥವಾ ಯಾವುದೇ ಸಮಾಧಿ ಅಥವಾ ದಫನು ಸ್ಥಳ, ಅಥವಾ ಯಾವುದೇ ಗುಹೆ, ಬಂಡೆ, ಶಿಲ್ಪ, ಶಾಸನ ಅಥವಾ ಏಕಶಿಲಾ ಕೃತಿಗಳಲ್ಲದೆ ಈ ಕೆಳಗಿನವುಗಳನ್ನೂಸಹ ಒಳಗೊಳ್ಳುತ್ತದೆ: (1) ಪ್ರಾಚೀನ ಸ್ಮಾರಕವೊಂದರ ಅವಶೇಷ; (2) ಪ್ರಾಚೀನ ಸ್ಮಾರಕ ಸ್ಥಳ; (3) ಬೇಲಿ ಅಥವಾ ಆವರಣವನ್ನು ಹಾಕಿ ಅಥವಾ ಇನ್ನಿತರ ರೀತಿಯಲ್ಲಿ ಸದರಿ ಪ್ರಾಚೀನ ಸ್ಮಾರಕವನ್ನು ಕಾಪಾಡಲು ಅಗತ್ಯವಿರುವ ಮಗ್ಗುಲಲ್ಲಿರುವ ಭೂಭಾಗ; ಮತ್ತು (4) ಪ್ರಾಚೀನ ಸ್ಮಾರಕಕ್ಕೆ ಪ್ರವೇಶಿಸಲು ಮತ್ತು ಅದನ್ನು ವೀಕ್ಷಿಸಲು ಬೇಕಾದ ದಾರಿ (ಕಲಂ 2(a)).

"ಪುರಾತನ ಸ್ಥಳ ಮತ್ತು ಅವಶೇಷ" ಎಂದರೆ ನೂರು ವರ್ಷಕ್ಕಿಂತ ಕಡಿಮೆಯಿಲ್ಲದಷ್ಟು ಸಮಯದಿಂದಲೂ ಅಸ್ತಿತ್ವದಲ್ಲಿದ್ದ ಐತಿಹಾಸಿಕ ಅಥವಾ ಪ್ರಾಕ್ತನ ಮಹತ್ವವುಳ್ಳ ಭಗ್ನಾವಶೇಷಗಳು ಅಥವಾ ಕುರುಹುಗಳು ಇರುವ ಅಥವಾ ಅವುಗಳು ಇರಬಹುದೆಂದು ಸಮಂಜಸವಾಗಿ ನಂಬಬಹುದಾದ ಯಾವುದೇ ಕ್ಷೇತ್ರಗಳಲ್ಲದೆ ಈ ಕೆಳಗಿನವುಗಳನ್ನು ಒಳಗೊಳ್ಳುತ್ತವೆ: (1) ಬೇಲಿ ಅಥವಾ ಆವರಣ ಹಾಕಿ ಅಥವಾ ಇನ್ನಿತರ ರೀತಿಯಲ್ಲಿ ಅವುಗಳನ್ನು ಕಾಪಾಡಲು ಬೇಕಾದ ಮಗ್ಗುಲಲ್ಲಿರುವ ಭೂಭಾಗ; ಮತ್ತು (2) ಸದರಿ ಕ್ಷೇತ್ರಕ್ಕೆ ಪ್ರವೇಶಿಸಲು ಅಥವಾ ಅದನ್ನು ವೀಕ್ಷಿಸಲು ಬೇಕಾದ ದಾರಿ (ಕಲಂ 2 (d)).

**2. 'ಸಂರಕ್ಷಿತ ಸ್ಮಾರಕಗಳು' ಮತ್ತು ಅವುಗಳ ರಕ್ಷಣೆಯ ವಿಧಾನಗಳು**

ರಾಷ್ಟ್ರೀಯ ಮಹತ್ವದ್ದೆಂದು 1958ರ ಅಧಿನಿಯಮದಡಿಯಲ್ಲಿ ಘೋಷಿಸಲಾದ ಯಾವುದೇ ಪ್ರಾಚೀನ ಸ್ಮಾರಕವನ್ನು 'ಸಂರಕ್ಷಿತ ಸ್ಮಾರಕ'ವೆಂದು ಪರಿಗಣಿಸಲಾಗಿದೆ (ಕಲಂ 2(J)). ಅವುಗಳ ರಕ್ಷಣೆಗೆ ಮೂರು ವಿಧಾನಗಳನ್ನು ಕಾನೂನು ಸೂಚಿಸಿದೆ: 1)ಖರೀದಿ, ದಾನ ಸ್ವೀಕಾರ, ಪಾಲಕತ್ವ, 2). ಖಾಸಗಿ ಮಾಲೀಕರೊಂದಿಗೆ ಕರಾರು ಮೂಲಕ ಹೊಂದಾಣಿಕೆ ಮತ್ತು 3) ಭೂ ಸ್ವಾಧೀನ. (i) ಪ್ರಾಕ್ತನ ಇಲಾಖೆಯ ಪ್ರಧಾನ ನಿರ್ದೇಶಕರು, ಕೇಂದ್ರ ಸರಕಾರದ ಅನುಮತಿಯ ಆಧಾರದಲ್ಲಿ ಯಾವುದೇ ಸಂರಕ್ಷಿತ ಸ್ಮಾರಕವನ್ನು ಖರೀದಿಸಬಹುದು, ಗೇಣಿಗೆ ಪಡೆಯಬಹುದು, ದಾನವಾಗಿ ಸ್ವೀಕರಿಸಬಹುದು ಅಥವಾ ಉಯಿಲಿನ ಪ್ರಕಾರ ಹೊಂದಬಹುದು. ಯಾವುದೇ ಮಾಲೀಕರಿಲ್ಲದ 'ಸಂರಕ್ಷಿತ ಸ್ಮಾರಕ'ವನ್ನು ಪ್ರಧಾನ ನಿರ್ದೇಶಕರು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸುವ ಮೂಲಕ ಸದರಿ ಸ್ಮಾರಕದ ಪಾಲಕತ್ವವನ್ನು ಪಡೆಯಬಹುದು. ಸದರಿ ಸ್ಮಾರಕದ ಮಾಲೀಕನ ಹಕ್ಕು, ಒಡೆತನ, ಹಿತಾಸಕ್ತಿಗಳು, ಈ ಅಧಿನಿಯಮಕ್ಕೆ ಹಾಗೂ ಕರಾರುಗಳಿಗೆ ಒಳಪಟ್ಟು, ಊರ್ಜಿತವಿರುತ್ತವೆ

(ನಾಲ್ಕನೇ ಪುಟಕ್ಕೆ)

# ಹಿಂದೂ ದತ್ತಕ ಪದ್ಧತಿ

ಡಾ. ಭೀಮಾಬಾಯಿ. ಎಸ್. ಮೂಲಗೆ
ಸಹಾಯಕ ಪ್ರಾಧ್ಯಾಪಕರು, ಕರಾಕಾವಿ, ಹುಬ್ಬಳ್ಳಿ

ಭಾರತದಲ್ಲಿ ಹಿಂದಿನಿಂದಲೂ ಚಾಲ್ತಿಯಲ್ಲಿರುವ ದತ್ತಕ ಪದ್ಧತಿಯು ಕಾರಣಾಂತರದಿಂದ ಮಕ್ಕಳಾಗದೆ ಇರುವ ಪೋಷಕರಿಗೆ ಅಥವಾ ಮದುವೆಯಾಗದೆ ತಂದೆ ಅಥವಾ ತಾಯಿಯಾಗಬೇಕೆಂದು ಹಂಬಲಿಸುವ ಪುರುಷ ಅಥವಾ ಮಹಿಳೆಗೆ ದತ್ತಕ ತೆಗೆದುಕೊಳ್ಳುವ ಅವಕಾಶವನ್ನು ನೀಡಿದ್ದರೂ ಸಹ, ದತ್ತಕ ಪದ್ಧತಿಗೆ ಸಂಬಂಧಿಸಿದ ಕಾನೂನು ಮಾತ್ರ ಇತ್ತೀಚಿನ ಬೆಳವಣಿಗೆಯಾಗಿದೆ. 1956ರಲ್ಲಿ *ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮವನ್ನು* ಜಾರಿಗೆ ತರಲಾಯಿತು. ಈ ಅಧಿನಿಯಮದ ಮುಖ್ಯ ಉದ್ದೇಶ ದತ್ತಕ ತೆಗೆದುಕೊಂಡ ಮಗುವಿನ ಹಕ್ಕು ಸಂರಕ್ಷಣೆಯಾಗಿದೆ.

*ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ, 1956* ಜಾರಿಗೆ ಬಂದ ನಂತರ ಯಾವುದೇ ಹಿಂದೂ ದತ್ತಕ ತೆಗೆದುಕೊಳ್ಳಬೇಕಾದರೆ ಅವನು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿಯೇ ದತ್ತಕ ತೆಗೆದುಕೊಳ್ಳಬೇಕು. ಇದನ್ನು ಉಲಂಘಿಸಿ ಮಾಡಿರುವಂತಹ ದತ್ತಕವು ಶೂನ್ಯವೆಂದು ಅಧಿನಿಯಮ ಹೇಳುತ್ತದೆ. ಈ ಅಧಿನಿಯಮದ ಅನುಸಾರ ಶೂನ್ಯವಾದಂತಹ ಯಾವುದೇ ದತ್ತಕವು ಯಾವುದೇ ರೀತಿಯ ಹಕ್ಕುಗಳನ್ನು ಸೃಷ್ಟಿಸುವುದಿಲ್ಲ ಹಾಗೇಯೇ ಶೂನ್ಯವಾದಂತಹ ದತ್ತಕದಡಿ ಪಡೆದುಕೊಂಡಂತಹ ಮಗುವಿನ ಹುಟ್ಟು ಕುಟುಂಬದಲ್ಲಿನ ಹಕ್ಕುಗಳು ನಾಶವಾಗುವುದಿಲ್ಲ.

**1. ದತ್ತಕದ ಅವಶ್ಯಕತೆಗಳು**

ಯಾವುದೇ ದತ್ತಕದ ಊರ್ಜಿತತೆಗೆ ಈ ಕೆಳಗಿನ ಅಂಶಗಳ ಇರುವಿಕೆಯು ಅವಶ್ಯಕವಾಗಿವೆ.

◆ದತ್ತಕ ತೆಗೆದುಕೊಳ್ಳಬಯಸುವ ವ್ಯಕ್ತಿಗೆ ದತ್ತಕ ತೆಗೆದುಕೊಳ್ಳುವ ಅರ್ಹತೆ ಮತ್ತು ಹಕ್ಕು ಇರಬೇಕು. ◆ದತ್ತಕ ಕೊಡುವ ವ್ಯಕ್ತಿಗೆ ದತ್ತಕ ಕೊಡುವ ಅರ್ಹತೆ ಇರಬೇಕು. ◆ದತ್ತಕ ವ್ಯಕ್ತಿಯು ದತ್ತಕಕ್ಕೆ ಅರ್ಹನಾಗಿರಬೇಕು ಮತ್ತು ◆ ದತ್ತಕ ಪ್ರಕ್ರಿಯೆಯು ಈ ಅಧಿನಿಯಮದಡಿಯಲ್ಲಿ ಸೂಚಿಸಿರುವ ಇತರ ಷರತ್ತುಗಳಿಗನುಗುಣವಾಗಿರಬೇಕು.

**2. ದತ್ತಕ ತೆಗೆದುಕೊಳ್ಳಬಯಸುವ ಹಿಂದೂ ಪುರುಷನ ಅರ್ಹತೆ**

◆ಸ್ವಸ್ಥಚಿತ್ತ ಹಾಗೂ ಪ್ರಾಪ್ತವಯಸ್ಕನಾಗಿರುವ ಯಾವುದೇ ಹಿಂದೂ ಪುರುಷನು, ಮಗ ಅಥವಾ ಮಗಳನ್ನು ದತ್ತಕ ತೆಗೆದುಕೊಳ್ಳಲು ಅರ್ಹನಾಗಿರುತ್ತಾನೆ. ◆ ಪರಂತು, ದತ್ತಕ ತೆಗೆದುಕೊಳ್ಳಬಯಸುವ ಯಾವುದೇ ಹಿಂದೂ ಪುರುಷನ ಪತ್ನಿಯು ಜೀವಿತವಿದ್ದಲ್ಲಿ, ಅವಳು ಸಂಪೂರ್ಣವಾಗಿ ಅಥವಾ ಅಂತಿಮವಾಗಿ ಸಂಸಾರವನ್ನು ಪರಿತ್ಯಜಿಸಿರದ ಹೊರತು ಅಥವಾ ಹಿಂದೂವಾಗಿರುವದು ಕೊನೆಗೊಂಡಿರದ ಹೊರತು ಅಥವಾ ನ್ಯಾಯಾಲಯ ಅವಳನ್ನು ಅಸ್ವಸ್ಥಚಿತ್ತಳೆಂದು ಘೋಷಿಸಿರದ ಹೊರತು ಅವಳ ಸಮ್ಮತಿ ಇಲ್ಲದೆ ಯಾವುದೇ ದತ್ತಕ ತೆಗೆದುಕೊಳ್ಳುವಂತಿಲ್ಲ. ◆ ದತ್ತಕ ಸಮಯದಲ್ಲಿ ಒಬ್ಬ ವ್ಯಕ್ತಿಗೆ ಒಬ್ಬರಿಗಿಂತ ಹೆಚ್ಚು ಪತ್ನಿಯರಿದ್ದರೆ ಅವರಲ್ಲಿ ಯಾರೊಬ್ಬರ ಸಮ್ಮತಿಯು ಅನವಶ್ಯಕವಾಗಿರದ ಹೊರತು ಎಲ್ಲ ಪತ್ನಿಯರ ಸಮ್ಮತಿಯು ಅವಶ್ಯಕವಾಗಿರುತ್ತದೆ.

**3. ದತ್ತಕ ತೆಗೆದುಕೊಳ್ಳಬಯಸುವ ಹಿಂದೂ ಮಹಿಳೆಯ ಅರ್ಹತೆ**

◆ಸ್ವಸ್ಥಚಿತ್ತ ಹಾಗೂ ಪ್ರಾಪ್ತವಯಸ್ಕನಾಗಿರುವ ಯಾವುದೇ ಹಿಂದೂ ಮಹಿಳೆಯು, ಮಗ ಅಥವಾ ಮಗಳನ್ನು ದತ್ತಕ ತೆಗೆದುಕೊಳ್ಳಲು ಅರ್ಹನಾಗಿರುತ್ತಾಳೆ. ◆ ಪರಂತು, ದತ್ತಕ ತೆಗೆದುಕೊಳ್ಳಬಯಸುವ ಯಾವುದೇ ಹಿಂದೂ ಮಹಿಳೆಯ ಪತಿಯು ಜೀವಿತವಿದ್ದಲ್ಲಿ, ಅವನು ಸಂಪೂರ್ಣವಾಗಿ ಅಥವಾ ಅಂತಿಮವಾಗಿ ಸಂಸಾರವನ್ನು ಪರಿತ್ಯಜಿಸಿರದ ಹೊರತು ಅಥವಾ ಹಿಂದೂವಾಗಿರುವದು ಕೊನೆಗೊಂಡಿರದ ಹೊರತು ಅಥವಾ ನ್ಯಾಯಾಲಯ ಅವನನ್ನು ಅಸ್ವಸ್ಥಚಿತ್ತನೆಂದು ಘೋಷಿಸಿರದ ಹೊರತು ಅವಳು ತನ್ನ ಪತಿಯ ಸಮ್ಮತಿ ಇಲ್ಲದೆ ಯಾವುದೇ ದತ್ತಕ ತೆಗೆದುಕೊಳ್ಳುವಂತಿಲ್ಲ.

**4. ದತ್ತಕ ಕೊಡಲು ಅರ್ಹತೆಯುಳ್ಳ ವ್ಯಕ್ತಿಗಳು**

◆ ಮಗುವಿನ ತಂದೆ ಅಥವಾ ತಾಯಿ ಅಥವಾ ಸಂರಕ್ಷಕನನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿಯು ಮಗುವನ್ನು ದತ್ತಕ ನೀಡಲು ಅರ್ಹನಲ್ಲ. ◆ಒಂದು ವೇಳೆ ತಂದೆ ಅಥವಾ ತಾಯಿ ಯಾರಾದರೂ ಒಬ್ಬರು ಜೀವಂತವಾಗಿದ್ದರೆ ಅವರು ಒಬ್ಬರೆ ತಮ್ಮ ಮಗ ಅಥವಾ ಮಗಳನ್ನು ದತ್ತಕ ನೀಡುವ ಅಧಿಕಾರವನ್ನು ಹೊಂದಿರುತ್ತಾರೆ. ◆ ಪರಂತು, ತಂದೆ ಅಥವಾ ತಾಯಿ ಇಬ್ಬರು ಬದುಕಿದ್ದು ಇಬ್ಬರಲ್ಲಿ ಯಾರೊಬ್ಬರು ಸಂಪೂರ್ಣವಾಗಿ ಅಥವಾ ಅಂತಿಮವಾಗಿ ಸಂಸಾರವನ್ನು ಪರಿತ್ಯಜಿಸಿರದ ಹೊರತು ಅಥವಾ ಹಿಂದೂವಾಗಿರುವದು ಕೊನೆಗೊಂಡಿರದ ಹೊರತು ಅಥವಾ ನ್ಯಾಯಾಲಯ ಅವರನ್ನು ಅಸ್ವಸ್ಥಚಿತ್ತರೆಂದು ಘೋಷಿಸಿರದ ಹೊರತು ಇತರರ ಸಮ್ಮತಿಯೊಂದಿಗೆ ದತ್ತಕ ನೀಡುವ ಹಕ್ಕನ್ನು ಚಲಾಯಿಸತಕ್ಕದ್ದು. ◆ತಂದೆ ಅಥವಾ ತಾಯಿ ಇಬ್ಬರು ಮೃತರಾಗಿರುವಾಗ ಅಥವಾ ಸಂಪೂರ್ಣವಾಗಿ ಅಥವಾ ಅಂತಿಮವಾಗಿ ಸಂಸಾರವನ್ನು ಪರಿತ್ಯಜಿಸಿರುವಾಗ ಅಥವಾ ಮಗುವನ್ನು ತ್ಯಜಿಸಿರುವಾಗ ಅಥವಾ ಸಕ್ಷಮ ಅಧಿಕಾರವ್ಯಾಪ್ತಿವುಳ್ಳ ನ್ಯಾಯಾಲಯದಿಂದ ಅಸ್ವಸ್ಥಚಿತ್ತರೆಂದು ಘೋಷಿತರಾಗಿರುವಾಗ ಅಥವಾ ಮಗುವಿನ ತಂದೆ ತಾಯಿಗಳು ಯಾರೆಂಬುವದು ಗೊತ್ತಿಲ್ಲದ ಪಕ್ಷದಲ್ಲಿ ಮಗುವಿನ ಪಾಲಕರು ನ್ಯಾಯಾಲಯದ ಪೂರ್ವಾನುಮತಿ ಮೇರೆಗೆ ಯಾವುದೇ ವ್ಯಕ್ತಿಗೆ ಮಗುವನ್ನು ದತ್ತಕ ನೀಡುವ ಅಧಿಕಾರವನ್ನು ನೀಡಬಹುದು. ◆ಯಾವುದೇ ನ್ಯಾಯಾಲಯ ಅನುಮತಿಸುವ ಪೂರ್ವದಲ್ಲಿ ಮಗುವಿನ ವಯಸ್ಸು ಮತ್ತು ತಿಳುವಳಿಕೆಯನ್ನು ಗಮನದಲ್ಲಿಟ್ಟುಕೊಂಡು ಅದರ ಇಚ್ಛೆಗಳನ್ನು ಯುಕ್ತವಾಗಿ ಪರಿಗಣಿಸಿ ಈ ದತ್ತಕವು ಮಗುವಿನ ಕಲ್ಯಾಣಕ್ಕಾಗಿರುವುದೆಂದು ಮನದಟ್ಟು ಮಾಡಿಕೊಂಡು ಹಾಗೂ ಅನುಮತಿ ಕೇಳುವ ಅರ್ಜಿದಾರನು ಯಾವುದೇ ಸಂದಾಯ ಅಥವಾ ಬಹುಮಾನ ಅಥವಾ ಆಮಿಷಿಗೆ ಒಳಗಾಗಿಲ್ಲವೆಂದೂ ಸಹ ಮನದಟ್ಟುಮಾಡಿಕೊಳ್ಳಬೇಕು.

**5. ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ವ್ಯಕ್ತಿಗಳು ದತ್ತಕ ಪಡೆಯಬಹುದಾದ ವ್ಯಕ್ತಿಗಳು**

◆ ಅವನು ಅಥವಾ ಅವಳು ಹಿಂದೂವಾಗಿರಬೇಕು. ◆ ಅವನು ಅಥವಾ ಅವಳು ಈ ಮೊದಲೇ ದತ್ತಕವಾಗಿರಬಾರದು. ◆ಅವನು ಅಥವಾ ಅವಳು, ವಿವಾಹಿತ ವ್ಯಕ್ತಿಗಳನ್ನು ದತ್ತಕ ತೆಗೆದುಕೊಳ್ಳಲು ಅವಕಾಶ ನೀಡುವಂತಹ ರೂಢಿ ಅಥವಾ ಆಚರಣೆ ಇದ್ದ ಹೊರತು ವಿವಾಹಿತರಾಗಿರಬಾರದು. ◆ಅವನು ಅಥವಾ ಅವಳಿಗೆ, ಹದಿನೈದು ವರ್ಷಗಳನ್ನು ತುಂಬಿದ ವ್ಯಕ್ತಿಗಳನ್ನು ದತ್ತಕ ತೆಗೆದುಕೊಳ್ಳಲು ಅವಕಾಶ ನೀಡುವಂತಹ ರೂಢಿ ಅಥವಾ ಆಚರಣೆ ಇದ್ದ ಹೊರತು ಹದಿನೈದು ವರ್ಷ ತುಂಬಿರಬಾರದು.

**6. ಕಾನೂನಾತ್ಮಕ ದತ್ತಕಕ್ಕೆ ಇರುವ ಇತರೆ ಷರತ್ತುಗಳು**

◆ಪ್ರತಿಯೊಂದು ದತ್ತಕವು ಈ ಕೆಳಗಿನ ಷರತ್ತುಗಳನ್ನು ಪಾಲಿಸಬೇಕು. ◆ ಮಗನನ್ನು ದತ್ತಕ ತೆಗೆದುಕೊಳ್ಳುವಾಗ, ದತ್ತಕ ತಂದೆ ಅಥವಾ ತಾಯಿಗೆ ಜೀವಂತ ಹಿಂದೂ ಮಗ ಅಥವಾ ಮಗನ ಮಗ (ಔರಸ ಅಥವಾ ದತ್ತಕ) ದತ್ತಕ ಸಮಯದಲ್ಲಿ ಇರಬಾರದು. ◆ಮಗಳನ್ನು ದತ್ತಕ ತೆಗೆದುಕೊಳ್ಳುವಾಗ, ದತ್ತಕ ತಂದೆ ಅಥವಾ ತಾಯಿಗೆ ಜೀವಂತ ಹಿಂದೂ ಮಗಳು ಅಥವಾ ಮಗನ ಮಗಳು (ಔರಸ ಅಥವಾ ದತ್ತಕ) ದತ್ತಕ ಸಮಯದಲ್ಲಿ ಇರಬಾರದು. ◆ಪುರುಷನು ದತ್ತಕ ತೆಗೆದುಕೊಳ್ಳುವಾಗ ಮತ್ತು ಮಹಿಳೆಯು ದತ್ತಕವಾಗಬೇಕಾಗಿರುವಾಗ, ದತ್ತಕ ತಂದೆಯು ದತ್ತಕ ಮಗಳಿಗಿಂತ ಕೊನೆಯಪಕ್ಷ 21 ವರ್ಷ ದೊಡ್ಡವನಾಗಿರಬೇಕು. ◆ ಮಹಿಳೆಯು ದತ್ತಕ ತೆಗೆದುಕೊಳ್ಳುವಾಗ ಮತ್ತು ಪುರುಷನು ದತ್ತಕವಾಗ ಬೇಕಾಗಿರುವಾಗ, ದತ್ತಕ ತಾಯಿಯು ದತ್ತಕ ಮಗನಿಗಿಂತ ಕೊನೆಯಪಕ್ಷ 21 ವರ್ಷ ದೊಡ್ಡವಳಾಗಿರಬೇಕು. ◆ಒಂದೇ ಮಗುವನ್ನು ಏಕಕಾಲದಲ್ಲಿ ಇಬ್ಬರು ಅಥವಾ ಅದಕ್ಕೂ ಹೆಚ್ಚು ಜನರು ದತ್ತಕ ಮಾಡಿಕೊಳ್ಳಲು ಬರುವದಿಲ್ಲ. ◆ಮಗುವನ್ನು ದತ್ತಕನ ತಂದೆ-ತಾಯಿಗಳಿಂದ ಅಥವಾ ಸಂಭಂದಿಸಿದ ಪಾಲಕನಿಂದ ಅಥವಾ ಅವರ ಪ್ರಾಧಿಕಾರದ ಮೇರೆಗೆ, ಅದು ಹುಟ್ಟಿದ ಕುಟುಂಬದಿಂದ ಅಥವಾ ತ್ಯಜಿಸಿದ ಮಗುವಿನ ತಂದೆ ತಾಯಿಗಳು ಗೊತ್ತಿಲ್ಲದ ಸಂದರ್ಭದಲ್ಲಿ ಅದು ಬೆಳೆದು ಬಂದ ಸ್ಥಳದಿಂದ ಅಥವಾ ಕುಟುಂಬದಿಂದ ದತ್ತಕ ಕುಟುಂಬಕ್ಕೆ ವರ್ಗಾಯಿಸುವ ಉದ್ದೇಶದಿಂದ ದತ್ತಕವಾಗಲಿರುವ ಮಗುವನ್ನು ವಾಸ್ತವಿಕವಾಗಿ ದತ್ತಕ ಕೊಡತಕ್ಕದ್ದು ಮತ್ತು ತೆಗೆದುಕೊಳ್ಳತಕ್ಕದ್ದು.◆ ಪರಂತು, ದತ್ತಕದ ಕಾನೂನು ಮಾನ್ಯತೆಗೆ ಯಾವುದೇ ರೀತಿಯ ಹೋಮದ ಆಚರಣೆಯು ಅವಶ್ಯಕವಾಗಿರುವುದಿಲ್ಲ.

**7. ದತ್ತಕದ ಪರಿಣಾಮಗಳು**

◆ದತ್ತಕ ಪಡೆದ ದಿನಾಂಕದಿಂದ ದತ್ತಕ ಮಗುವನ್ನು ಎಲ್ಲ ಉದ್ದೇಶಗಳಿಗಾಗಿ ದತ್ತಕ ಪಡೆದಿರುವ ತಂದೆ ತಾಯಿಯ ಮಗುವೆಂದು ಭಾವಿಸತಕ್ಕದ್ದು ಮತ್ತು ಅಂತಹ ಮಗು ದತ್ತಕ ದಿನಾಂಕದಿಂದ ತನ್ನ ಹುಟ್ಟು ಕುಟುಂಬ ದಿಂದ ಎಲ್ಲ ಸಂಬಂಧಗಳು ಕಡಿದುಹೋಗಿ ಅವು ದತ್ತಕ ಕುಟುಂಬದಲ್ಲಿ ಪ್ರತಿಸ್ಥಾಪಿತವಾಗುತ್ತವೆ. ಪರಂತು, ◆ ಮಗು ತನ್ನ ಹುಟ್ಟು ಕುಟುಂಬದಲ್ಲಿಯೇ ಮುಂದುವರಿದಿದ್ದರೆ, ತಾನು ಯಾವ ವ್ಯಕ್ತಿಯನ್ನು ಮದುವೆಯಾಗಲು ಸಾಧ್ಯವಿರುತ್ತಿರಲಿಲ್ಲವೋ ದತ್ತಕದ ನಂತರವು ಅಂತಹ ವ್ಯಕ್ತಿಯನ್ನು ಮದುವೆಯಾಗಲು ಬರುವುದಿಲ್ಲ. ◆ ದತ್ತಕಕ್ಕೆ ಮುಂಚೆ ದತ್ತಕ ಮಗುವಿನಲ್ಲಿ ನಿಹಿತವಾದ ಯಾವುದೇ ಸ್ವತ್ತು, ಅವನ ಅಥವಾ ಅವಳ ಹುಟ್ಟು ಕುಟುಂಬದಲ್ಲಿಯ ಸಂಬಂಧಿಕರನ್ನು ಸಂರಕ್ಷಿಸಲು ಇರುವ ಹೊಣೆಯನ್ನೊಳಗೊಂಡು, ಅಂತಹ ಸ್ವತ್ತಿನ ಒಡೆತನಕ್ಕೆ ಸಂಬಂಧಿಸಿದ ಹೊಣೆಗಳು, ಯಾವುದಾದರೂ ಇದ್ದರೆ ಅವುಗಳಿಗೊಳಪಟ್ಟು ಅಂತಹ ವ್ಯಕ್ತಿಯಲ್ಲಿ ನಿಹಿತವಾಗಿರುವುದು ಮುಂದುವರಿಯತಕ್ಕದ್ದು. ◆ದತ್ತಕ ಮಗುವು ಯಾವ ವ್ಯಕ್ತಿಯಿಂದಲೂ, ದತ್ತಕಕ್ಕೆ ಮುಂಚೆ ಅವನಲ್ಲಿ ಅಥವಾ ಅವಳಲ್ಲಿ ನಿಹಿತವಾದಯಾವುದೇ ಸ್ವತ್ತನ್ನು ಕಸಿದುಕೊಳ್ಳುವಂತಿಲ್ಲ.

**8. ತಮ್ಮ ಸ್ವತ್ತನ್ನು ವಿಲೆ ಮಾಡಲು ದತ್ತಕ ತಂದೆ ತಾಯಿಗಳಿಗಿರುವ ಹಕ್ಕುಗಳು**

◆ತದ್ವಿರುದ್ಧವಾದ ಯಾವುದೇ ಒಪ್ಪಂದಕ್ಕೆ ಒಳಪಟ್ಟು, ದತ್ತಕ ತಂದೆ ಅಥವಾ ತಾಯಿಯ, ಅವನ ಅಥವಾ ಅವಳ ಸ್ವತ್ತನ್ನು ಜೀವಿತ ವ್ಯಕ್ತಿಗಳ ನಡುವಣ ವರ್ಗಾವಣೆಯ ಮೂಲಕ ಅಥವಾ ಮರಣ ಶಾಸನದ ಮೂಲಕ ವಿಲೆ ಮಾಡುವ ಅಧಿಕಾರವನ್ನು ದತ್ತಕವು ತಪ್ಪಿಸುವಂತಿಲ್ಲ.

**9. ಕೆಲವು ಸಂದರ್ಭಗಳಲ್ಲಿ ದತ್ತಕ ತಾಯಿಯ ನಿರ್ಧರಿಸುವಿಕೆ**

◆ಪತ್ನಿಯು ಜೀವಂತವಾಗಿರುವ ಒಬ್ಬ ಹಿಂದೂವು ಮಗುವನ್ನು ದತ್ತಕ ತೆಗೆದುಕೊಂಡು ಸಂದರ್ಭದಲ್ಲಿ ಅವಳನ್ನು ದತ್ತಕ ತಾಯಿಯೆಂದು ಭಾವಿಸತಕ್ಕದ್ದು. ◆ಒಬ್ಬರಿಗಿಂತ ಹೆಚ್ಚು ಪತ್ನಿಯರ ಒಪ್ಪಿಗೆಯನ್ನು ಪಡೆದು ದತ್ತಕ ತೆಗೆದುಕೊಂಡಿರುವ ಸಂದರ್ಭದಲ್ಲಿ ಅವರೊಳಗೆ ಜೇಷ್ಠಳಾದವಳನ್ನು ದತ್ತಕ ತಾಯಿಯೆಂದು ಮತ್ತು ಇತರರನ್ನು ಮಲ ತಾಯಿಯೆಂದು ಪರಿಗಣಿಸತಕ್ಕದ್ದು. ◆ವಿಧುರ ಅಥವಾ ಅವಿವಾಹಿತನು ಮಗುವನ್ನು ದತ್ತಕ

(ನಾಲ್ಕನೇ ಪುಟಕ್ಕೆ)

(ಎರಡನೇ ಪುಟದಿಂದ)

(ಕಲಂ 5). ಸದರಿ ಸಂರಕ್ಷಿತ ಸ್ಮಾರಕದಲ್ಲಿ ಪದ್ಧತಿಯಂತೆ ನಡೆಯುವ ಧಾರ್ಮಿಕ ಆಚರಣೆಗಳಿಗೆ ಧಕ್ಕೆಯಿರುವುದಿಲ್ಲ.

(ii) ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕಾರಣಗಳಿಂದಾಗಿ ಪ್ರಾಚೀನ ಸ್ಮಾರಕವು ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಯ ಮಾಲೀಕತ್ವ ಮತ್ತು ಸ್ವಾಧೀನದಲ್ಲಿ ಇರುವ ಸಂದರ್ಭದಲ್ಲಿ ಅಂತಹ ಸ್ಮಾರಕವನ್ನು ಕಾಪಾಡಲು ಪ್ರಧಾನ ನಿರ್ದೇಶಕರು ಕರಾರು ಮಾಡುವ ಕ್ರಮವನ್ನು ಕೈಗೊಳ್ಳಬಹುದು. ಈ ಉದ್ದೇಶಕ್ಕಾಗಿ ಅವರು ಕೇಂದ್ರ ಸರಕಾರದ ಅನುಮತಿಯನ್ನು ಪಡೆದು ಸದರಿ ಪ್ರಾಚೀನ ಸ್ಮಾರಕದ ಮಾಲೀಕರೊಂದಿಗೆ ಅದರ ಪೋಷಣೆಗಾಗಿ ನಿರ್ದಿಷ್ಟ ಅವಧಿಯೊಳಗೆ ಒಂದು ಕರಾರಿಗೆ ಒಡಂಬಡಬೇಕೆಂದು ಪ್ರಸ್ತಾಪಿಸಬಹುದು.ಅಂತಹ ಕರಾರು ಈ ಕೆಳಗಿನ ಎಲ್ಲ ಅಥವಾ ಯಾವುದಾದರೂ ವಿಚಾರಗಳಿಗೆ ಸಂಬಂಧಿಸಿದ್ದಾಗಿರಬಹುದು: (ಅ) ಸ್ಮಾರಕದ ಪೋಷಣೆ; (ಆ) ಸ್ಮಾರಕದ ಸುಪರ್ದು ಮತ್ತು ಅದರ ಕಾವಲುಗಾರನ ಕರ್ತವ್ಯ; (ಇ) ಮಾಲೀಕನ ಹಕ್ಕಿನ ಮಿತಿಗಳು (ಸ್ಮಾರಕವನ್ನು ಬಳಸುವ ಉದ್ದೇಶದ ಬಗ್ಗೆ; ಸ್ಮಾರಕವನ್ನು ವೀಕ್ಷಿಸಲು ಬರುವವರಿಗೆ ಶುಲ್ಕ ವಿಧಿಸುವುದರ ಬಗ್ಗೆ; ಸ್ಮಾರಕವನ್ನು ನಾಶ ಮಾಡುವ, ಸ್ಥಳಾಂತರಗೊಳಿಸುವ, ಬದಲಿಸುವ ಅಥವಾ ಕುರೂಪಗೊಳಿಸುವ ಕೃತ್ಯಗಳ ಬಗ್ಗೆ; ಸ್ಮಾರಕದ ಮೇಲೆ ಅಥವಾ ಬಳಿಯಲ್ಲಿ ಯಾವುದೇ ಕಟ್ಟಡ ಕಟ್ಟುವ ಬಗ್ಗೆ); (ಈ) ಸಾರ್ವಜನಿಕರಿಗೆ, ವಿಶಿಷ್ಟ ಸಾರ್ವಜನಿಕ ವರ್ಗಕ್ಕೆ, ಪ್ರಾಕ್ತನ ವಿಭಾಗದ ಅಧಿಕಾರಿಗಳಿಗೆ ಮತ್ತು ಮಾಲೀಕನು ನಿಯೋಜಿಸಿದ ವ್ಯಕ್ತಿಗಳಿಗೆ, ಪ್ರಾಚೀನ ಸ್ಮಾರಕದ ವೀಕ್ಷಣೆ ಮತ್ತು ಪೋಷಣೆಯ ಉದ್ದೇಶಕ್ಕಾಗಿ ಸ್ಮಾರಕವನ್ನು ತೆರೆದಿಡುವ ಬಗ್ಗೆ; (ಉ) ಸ್ಮಾರಕದ ಜಾಗೆಯನ್ನಾಗಲಿ, ಅದರ ಮಗ್ಗುಲಿನ ಜಾಗೆಯನ್ನಾಗಲಿ, ಮಾಲೀಕನು ವಿಕ್ರಯಮಾಡುವ ಮೊದಲು ಕೇಂದ್ರ ಸರಕಾರಕ್ಕೆ ತಿಳುವಳಿಕೆ ಪತ್ರ ನೀಡಿ, ಕೇಂದ್ರ ಸರಕಾರವು ಸದರಿ ಭೂಮಿಯನ್ನು ಮಾರುಕಟ್ಟೆ ಧಾರಣೆಯಲ್ಲಿ ಕೊಳ್ಳಲು ಅವಕಾಶವನ್ನು ಮೀಸಲಿರಿಸುವುದರ ಬಗ್ಗೆ; (ಊ) ಸ್ಮಾರಕದ ಪೋಷಣೆಗಾಗಿ ಮಾಲೀಕನು ಅಥವಾ ಕೇಂದ್ರ ಸರಕಾರವು ಭರಿಸುವ ವೆಚ್ಚದ ಬಗ್ಗೆ; (ಋ) ಪೋಷಣೆಗಾಗಿ ವೆಚ್ಚ ಮಾಡಿದುದರಿಂದ ಕೇಂದ್ರ ಸರಕಾರಕ್ಕೆ ಸ್ಮಾರಕದ ಕುರಿತು ಹಕ್ಕು ಪ್ರಾಪ್ತಿಯಾಗುವ ಬಗ್ಗೆ; (ಎ) ಕರಾರಿಗೆ ಸಂಬಂಧಿಸಿದ ತಕ್ರಾರುಗಳನ್ನು ಪರಿಹರಿಸಲು ಪ್ರಾಧಿಕಾರವನ್ನು ರಚಿಸುವ ಬಗ್ಗೆ; ಮತ್ತು (ಏ) ಸ್ಮಾರಕದ ಪೋಷಣೆಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಸದರಿ ಕರಾರು, ಷರತ್ತುಗಳನ್ನು ವಿಧಿಸಬಹುದು. ಅಂತಹ ಕರಾರುಗಳು ಕನಿಷ್ಠ ಮೂರು ವರ್ಷ ಜಾರಿಯಲ್ಲಿರತಕ್ಕದ್ದು ಮತ್ತು ಆ ತರುವಾಯ ಆರು ತಿಂಗಳ ತಿಳುವಳಿಕೆ ಪತ್ರದ ಮೂಲಕ ಕರಾರನ್ನು ರದ್ದುಗೊಳಿಸುವ ಪಕ್ಷದಲ್ಲಿ ಸರಕಾರವು ಕಳೆದ 5 ವರ್ಷಗಳಲ್ಲಿ ವ್ಯಯಿಸಿದ ಖರ್ಚನ್ನು ಸರಕಾರಕ್ಕೆ ಮರುಭರಣ ಮಾಡಬೇಕು (ಕಲಂ 6).

ಒಂದು ವೇಳೆ ಪ್ರಾಚೀನ ಸ್ಮಾರಕದ ಮಾಲೀಕನು ಅಪ್ರಾಪ್ತ ವಯಸ್ಕನಾಗಿದ್ದ ಸಂದರ್ಭದಲ್ಲಿ ಅಥವಾ ಇನ್ನಿತರ ಊನತೆಯಿದ್ದ ಸಂದರ್ಭದಲ್ಲಿ, ಅವನ ಪರವಾಗಿ ಕಾನೂನು ರೀತ್ಯಾ ಪಾಲಕನಾಗಿರುವ ವ್ಯಕ್ತಿಯು ಕರಾರು ಮಾಡಲು ಉದ್ಯುಕ್ತನಾಗಬಹುದು. ಸ್ಮಾರಕವು ಗ್ರಾಮದ ಸೊತ್ತಾಗಿದ್ದರೆ, ಗ್ರಾಮದ ಮುಖ್ಯಸ್ಥನು ಅಥವಾ ಅಧಿಕಾರಿಯು ಕರಾರು ಮಾಡಬಹುದು. ಆದರೆ ಕರಾರು ಮಾಡುವ ವ್ಯಕ್ತಿಯು ಪ್ರಾಚೀನ ಸ್ಮಾರಕಕ್ಕೆ ಸಂಬಂಧಿಸಿದ ಧರ್ಮದವನಾಗಿರಬೇಕು (ಕಲಂ 7). ಒಂದು ವೇಳೆ ಪ್ರಾಚೀನ ಸ್ಮಾರಕದ ಮಾಲೀಕನು ಅಥವಾ ಅವನ ಪರವಾಗಿ ಕಾನೂನು ರೀತ್ಯಾ ವ್ಯವಹರಿಸುವ ಹಕ್ಕುಳ್ಳವನು ಕರಾರು ಪ್ರಸ್ತಾಪವನ್ನು ತಿರಸ್ಕರಿಸಿದರೆ ಎರಡು ರೀತಿಯ ಪರಿಣಾಮಗಳು ಆಗುತ್ತವೆ: (1) ಸದರಿ ಪ್ರಾಚೀನ ಸ್ಮಾರಕವನ್ನು ಸುಸಜ್ಜಿತವಾಗಿಡಲು ಯಾವುದಾದರೂ ದತ್ತಿಯು ಸ್ಥಾಪಿಸಲ್ಪಟ್ಟಿದ್ದರೆ ಅಂತಹ ದತ್ತಿಯ ಸಂಪನ್ಮೂಲವನ್ನು ಬಳಸಿ ಸ್ಮಾರಕವನ್ನು ಸುಸಜ್ಜಿತವಾಗಿ ಇಡಿಸಲು ಆದೇಶಿಸುವಂತೆ ಜಿಲ್ಲಾ ನ್ಯಾಯಾಲಯಕ್ಕೆ ಕೇಂದ್ರಸರಕಾರವು ದಾವೆ ಸಲ್ಲಿಸಬಹುದು ಮತ್ತು ಜಿಲ್ಲಾ ನ್ಯಾಯಾಧೀಶರು ಈ ಕುರಿತು ಸೂಕ್ತ ಆದೇಶವನ್ನು ನೀಡಬಹುದು (ಕಲಂ 8); (2) ಕೇಂದ್ರ ಸರಕಾರವು ಮಾಲೀಕ ಅಥವಾ ಅವನ ಕಾನೂನಾತ್ಮಕ ಪಾಲಕನ ಮೇಲೆ ಆದೇಶ ಹೊರಡಿಸುತ್ತಾ ಅವನನ್ನು ಕಲಂ 6ರಲ್ಲಿ ಹೇಳಲಾದ ಎಲ್ಲ ವಿಚಾರಗಳ ಬಗ್ಗೆ ಬಾಧ್ಯಸ್ಥನನ್ನಾಗಿ ಮಾಡಬಹುದು ಮತ್ತು ಅಂತಹ ಸಂದರ್ಭದಲ್ಲಿ ಸದರಿ ವ್ಯಕ್ತಿಯು ಕೇಂದ್ರ ಸರಕಾರಕ್ಕೆ ಸ್ಮಾರಕದ ಪೋಷಣೆಯ ಖರ್ಚನ್ನು ಭರಿಸತಕ್ಕದ್ದು (ಕಲಂ 9).

ಪ್ರಾಚೀನ ಸ್ಮಾರಕದ ಮಾಲೀಕನಿಂದ ಅಥವಾ ಅವನ ಪರವಾಗಿ ಕಾನೂನು ರೀತ್ಯಾ ವ್ಯವಹರಿಸುವವನಿಂದ ಸದರಿ ಸ್ಮಾರಕವನ್ನು ಸಾರ್ವಜನಿಕ ಹರಾಜು ಮೂಲಕ ಪಡೆದುಕೊಂಡ ವ್ಯಕ್ತಿಗೆ ಕೂಡಾ ಸ್ಮಾರಕವನ್ನು ರಕ್ಷಿಸಲು ಮೇಲೆ ಹೇಳಿದ ಎಲ್ಲಾ ಜವಾಬ್ದಾರಿಗಳಿವೆ (ಕಲಂ 12). ಪ್ರಾಚೀನ ಸ್ಮಾರಕದ ರಕ್ಷಣೆಯ ಬಗ್ಗೆ ಕರಾರು ಮಾಡಿಕೊಂಡ ಮಾಲೀಕನು ಅಥವಾ ಅವನ ಪರವಾಗಿ ಕರ್ತವ್ಯ ನಿರ್ವಹಿಸುವವನು ಸಮಂಜಸ ಸಮಯದೊಳಗೆ ಕರಾರಿನ ಷರತ್ತುಗಳನ್ನು ಪೂರೈಸಲು ತಿರಸ್ಕರಿಸಿದರೆ ಅಥವಾ ವಿಫಲನಾದರೆ ಪ್ರಧಾನ ನಿರ್ದೇಶಕನು ಸಂಬಂಧಪಟ್ಟ ಯಾವುದೇ ಕೆಲಸವನ್ನು ನಿರ್ವಹಿಸಲು ಇನ್ನೊಬ್ಬ ವ್ಯಕ್ತಿಗೆ ಅನುಜ್ಞೆ ನೀಡಬಹುದು. ಅಂತಹ ಸಂದರ್ಭಗಳಲ್ಲಿ ಮಾಲೀಕನು ಅಥವಾ ಅವನ ಪರವಾಗಿ ಕರ್ತವ್ಯವಹಿಸುವ ವ್ಯಕ್ತಿಯು ಸದರಿ ಕೆಲಸಗಳ ವೆಚ್ಚವನ್ನು ಭರಿಸಲು ಬಾಧ್ಯನು. ಈ ಕುರಿತು ತಕ್ರಾರೇನಾದರೂ ಬಂದರೆ ಕೇಂದ್ರ ಸರಕಾರದ ನಿರ್ಣಯವು ಅಂತಿಮವಾಗಿರುತ್ತದೆ. ಪ್ರಾಚೀನ ಸ್ಮಾರಕದ ಮಾಲೀಕನು ಅಥವಾ ನಿವಾಸಿಗನು ಕರಾರಿನ ಷರತ್ತುಗಳನ್ನು ಉಲ್ಲಂಘಿಸುತ್ತ ಸದರಿ ಸ್ಮಾರಕವನ್ನು ನಾಶಪಡಿಸುವ, ಸ್ಥಳಾಂತರಿಸುವ, ಬದಲಾಯಿಸುವ, ವಿಕೃತಗೊಳಿಸುವ, ಹಾನಿಗೊಳಿಸುವ ಅಥವಾ ದುರುಪಯೋಗಪಡಿಸುವ ಉದ್ದೇಶ ಹೊಂದಿದ್ದಾನೆಂದು ಪ್ರಧಾನ ನಿರ್ದೇಶಕನು ಶಂಕೆಪಟ್ಟಲ್ಲಿ ಸದರಿ ಮಾಲೀಕ ಅಥವಾ ನಿವಾಸಿಗನಿಗೆ ತನ್ನ ಲಿಖಿತ ಅಹವಾಲು ಹೇಳಿಕೊಳ್ಳುವ ಒಂದು ಅವಕಾಶವನ್ನಿತ್ತು, ಸದರಿ ಕರಾರನ್ನು ಉಲ್ಲಂಘಿಸದಂತೆ ಪ್ರಧಾನ ನಿರ್ದೇಶಕನು ಆದೇಶಿಸಬಹುದು (ಕಲಂ 10).

(iii) 'ಸಂರಕ್ಷಿತ ಸ್ಮಾರಕ'ಗಳನ್ನು ಸ್ವಾಧೀನಪಡಿಸುವುದು: ಯಾವುದೇ ಸಂರಕ್ಷಿತ ಸ್ಮಾರಕವು ನಾಶವಾಗುವ, ಹಾನಿಗೊಳ್ಳುವ, ದುರುಪಯೋಗಕ್ಕೆ ಒಳಗಾಗುವ ಅಥವಾ ನಶಿಸಿಹೋಗುವ ಅಪಾಯದಲ್ಲಿದೆಯೆಂದು ಕೇಂದ್ರ ಸರ್ಕಾರವು ಶಂಕೆಪಟ್ಟಾಗ ಸದರಿ ಸ್ಮಾರಕವನ್ನು *ಭೂಸ್ವಾಧೀನ ಅಧಿನಿಯಮ, 1894*ರ ಅಡಿಯಲ್ಲಿ ಸಂರಕ್ಷಿತ ಸ್ಮಾರಕದ ಪೋಷಣೆಯು ಸಾರ್ವಜನಿಕ ಉದ್ದೇಶದ ವ್ಯಾಪ್ತಿಯಲ್ಲಿ ಬರುತ್ತದೆಯೆಂಬ ಅರ್ಥದಲ್ಲಿ ಸ್ವಾಧೀನ ಪಡಿಸಬಹುದು (ಕಲಂ 13). ಈ ರೀತಿ ಸ್ವಾಧೀನಪಡಿಸಲಾದ ಸ್ಮಾರಕವನ್ನು ಅಥವಾ ಪಾಲಕತ್ವ/ದಾನ/ಉಯಿಲು/ಗೇಣಿಯ ಮೂಲಕ ಕೇಂದ್ರ ಸರಕಾರದ ಸುಪರ್ದಿಗೆ ಬಂದ ಸ್ಮಾರಕದ ಪೋಷಣೆಯ ಜವಾಬ್ದಾರಿಯನ್ನು ಕೇಂದ್ರ ಸರಕಾರವು ನಿಭಾಯಿಸಬೇಕು.ಸದರಿ ಉದ್ದೇಶಕ್ಕಾಗಿ ಸ್ಮಾರಕವನ್ನು ಸಮಂಜಸ ಸಮಯದಲ್ಲಿ ಪ್ರವೇಶಿಸಲು, ವೀಕ್ಷಿಸಲು ಮತ್ತು ಅಲ್ಲಿಗೆ ಆವಶ್ಯಕ ವಸ್ತುಗಳನ್ನು ತರಲು ಪ್ರಧಾನ ನಿರ್ದೇಶಕನಿಗೆ, ಅವನ ಅಧೀನ ಅಧಿಕಾರಿಗಳಿಗೆ, ಏಜೆಂಟರಿಗೆ ಮತ್ತು ಕೆಲಸಗಾರರಿಗೆ ಹಕ್ಕಿರುತ್ತದೆ (ಕಲಂ 14). ಉದಾಹರಣೆಗೆ ಸಂರಕ್ಷಿತ ಸ್ಮಾರಕವಾದ ಒಂದು ದೇವಾಲಯದ ಪುನರ್ರಚನೆ ಅಥವಾ ನವೀಕರಣದ ಸಂದರ್ಭದಲ್ಲಿ ಸೂಕ್ತ ಧಾರ್ಮಿಕ ಆಚರಣೆಯೊಂದಿಗೆ ತಾತ್ಕಾಲಿಕವಾಗಿ ಪೂಜಾ ವಿಗ್ರಹವನ್ನು ಸ್ಥಳಾಂತರಿಸುವುದು ಕಲಂ 14ರ ವ್ಯಾಪ್ತಿಯೊಳಗೆ ಬರುತ್ತದೆ (*ಆರ್ಕಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ ವಿ. ಮಧ್ಯಪ್ರದೇಶ ರಾಜ್ಯ* (2014) 12 ಎಸ್‌ಸಿಸಿ 3ಎ).

ಸಂರಕ್ಷಿತ ಸ್ಮಾರಕಗಳ ಪೋಷಣೆಗೆ ಪ್ರಧಾನ ನಿರ್ದೇಶಕನು ಜನರಿಂದ ಸ್ವಯಂಪ್ರೇರಿತ ವಂತಿಗೆಯನ್ನು ನಿಯಮಾನುಸಾರ ಸ್ವೀಕರಿಸಬಹುದು (ಕಲಂ 15). ಕೇಂದ್ರ ಸರ್ಕಾರದ ಪೋಷಣೆಯಲ್ಲಿರುವ ಯಾವುದೇ ಸಂರಕ್ಷಿತ ಸ್ಮಾರಕವು ಪೂಜಾ ಸ್ಥಳ ಅಥವಾ ಸಮಾಧಿಯಾಗಿದ್ದಲ್ಲಿ ಅದನ್ನು ಅದರ ಸ್ವಭಾವಕ್ಕೆ ವ್ಯತಿರಿಕ್ತವಾದ ಉದ್ದೇಶಗಳಿಗೆ ಬಳಸಬಾರದು. ಕೇಂದ್ರ ಸರಕಾರದ ಪಾಲಕತ್ವ ಅಥವಾ ಸುಪರ್ದಿನಲ್ಲಿರುವ (ದಾನ, ಉಯಿಲು ಮತ್ತು ಗೇಣಿ ಮೂಲಕ ಬಂದಿರುವ) ಸಂರಕ್ಷಿತ ಸ್ಮಾರಕವು ಯಾವುದೇ ಸಮುದಾಯದ ಧಾರ್ಮಿಕ ಪೂಜೆ ಮತ್ತಿತರ ಆಚರಣೆಗೊಳಪಡುತ್ತಿದ್ದಲ್ಲಿ, ಸದರಿ ಸ್ಮಾರಕವನ್ನು ಮಲಿನ ಅಥವಾ ಅಪವಿತ್ರಗೊಳಿಸಬಾರದೆಂದು ಸರಕಾರವು ಉಪಬಂಧಿಸಬಹುದು (ಕಲಂ 16). 1958ರ ಅಧಿನಿಯಮದ ಅಡಿಯಲ್ಲಿ ಮಾಡಿದ ನಿಯಮಗಳಿಗೆ ಒಳಪಟ್ಟು, ಯಾವುದೇ ಸಂರಕ್ಷಿತ ಸ್ಮಾರಕಕ್ಕೆ ಪ್ರವೇಶಿಸಲು ಸಾರ್ವಜನಿಕರಿಗೆ ಹಕ್ಕಿದೆ (ಕಲಂ 18). ಪರಿಣಾಮವಾಗಿ, ಸ್ಮಾರಕದ ಗೈಡ್ (ಪ್ರವಾಸಿ ಮಾರ್ಗದರ್ಶಕ) ಆಗಲು ಇರುವ ಅರ್ಹತೆಗಳನ್ನು ಸರಕಾರವು ಸ್ವೇಚ್ಛಾನುಸಾರವಾಗಿ ನಿಗದಿಪಡಿಸುವಂತಿಲ್ಲ (*ಬಿ. ಪಿ. ಶರ್ಮಾ ವಿ. ಭಾರತ ಒಕ್ಕೂಟ*, (2003) 7 ಎಸ್‌ಸಿಸಿ 309).

ಪ್ರಾಚೀನ ಸ್ಮಾರಕದ ಮಾಲೀಕನು ಅಥವಾ ನಿವಾಸಿಗನು ಕರಾರಿನ ಷರತ್ತುಗಳನ್ನು ಉಲ್ಲಂಘಿಸುತ್ತ ಸದರಿ ಸ್ಮಾರಕವನ್ನು ನಾಶಪಡಿಸುವ, ಸ್ಥಳಾಂತರಿಸುವ, ಬದಲಾಯಿಸುವ, ಕುರೂಪಗೊಳಿಸುವ (ವಿಕೃತಿಗೊಳಿಸುವ), ಹಾನಿಗೊಳಿಸುವ ಅಥವಾ ದುರುಪಯೋಗಪಡಿಸುವ ಉದ್ದೇಶ ಹೊಂದಿದ್ದಾನೆಂದು ಪ್ರಧಾನ ನಿರ್ದೇಶಕನು ಶಂಕೆಪಟ್ಟಲ್ಲಿ ಸದರಿ ಮಾಲೀಕ ಅಥವಾ ನಿವಾಸಿಗನಿಗೆ ತನ್ನ ಲಿಖಿತ ಅಹವಾಲು ಹೇಳಿಕೊಳ್ಳುವ ಒಂದು ಅವಕಾಶವನ್ನಿತ್ತು ಸದರಿ ಕರಾರನ್ನು ಉಲ್ಲಂಘಿಸದಂತೆ ಪ್ರಧಾನ ನಿರ್ದೇಶಕನು ಆದೇಶಿಸಬಹುದು (ಕಲಂ 10).

(ಅಗಸ್ಟ್ ಸಂಚಿಕೆಯಲ್ಲಿ ಮುಂದುವರೆಯವುದು)

# ಹಿಂದೂ ದತ್ತಕ...

(ಮೂರನೇ ಪುಟದಿಂದ)

ತೆಗೆದುಕೊಂಡಿರುವಲ್ಲಿ ಆ ತರುವಾಯ ಅವನು ಮದುವೆಯಾಗುವ ಅವನ ಪತ್ನಿಯು ದತ್ತಕ ಮಗುವಿನ ಮಲತಾಯಿಯೆಂದು ಭಾವಿಸತಕ್ಕದ್ದು. ◆ವಿಧವೆ ಅಥವಾ ಅವಿವಾಹಿತೆ ಮಹಿಳೆಯು ಮಗುವನ್ನು ದತ್ತಕ ತೆಗೆದುಕೊಂಡಲ್ಲಿ ಆ ತರುವಾಯ ಅವಳು ಮದುವೆಯಾಗುವ ಅವಳ ಪತಿಯು ದತ್ತಕ ಮಗುವಿನ ಮಲ ತಂದೆಯೆಂದು ಭಾವಿಸತಕ್ಕದ್ದು.

**10. ಕಾನೂನು ಮಾನ್ಯ ದತ್ತಕವು ರದ್ದಾಗತಕ್ಕದ್ದಲ್ಲ**

ಕಾನೂನು ಮಾನ್ಯವಾಗಿ ಮಾಡಿದ ಯಾವುದೇ ದತ್ತಕವನ್ನು ದತ್ತಕ ತಂದೆ ಅಥವಾ ತಾಯಿ ಅಥವಾ ಇತರ ಯಾವುದೇ ವ್ಯಕ್ತಿಯು ರದ್ದುಗೊಳಿಸತಕ್ಕದ್ದಲ್ಲ ಅಥವಾ ದತ್ತಕ ಮಗುವು ಅವನ ಅಥವಾ ಅವಳ ಸ್ಥಾನಮಾನವನ್ನು ಪರಿತ್ಯಜಿಸತಕ್ಕದ್ದಲ್ಲ ಮತ್ತು ಅವನ ಅಥವಾ ಅವಳ ಹುಟ್ಟು ಕುಟುಂಬಕ್ಕೆ ವಾಪಾಸಾಗುವಂತಿಲ್ಲ.

11. ದತ್ತಕಕ್ಕೆ ಸಂಬಂಧಿಸಿದ ನೋಂದಾಯಿತ ದಸ್ತಾವೇಜು ಜಾರಿಯಲ್ಲಿರುವ ಕಾನೂನಿನ ಪ್ರಕಾರ ಮಗುವನ್ನು ದತ್ತಕ ಕೊಡುವ ಅಥವಾ ತೆಗೆದುಕೊಳ್ಳು ವ್ಯಕ್ತಿಗಳು ದತ್ತಕದ ಅಭಿಲೇಖವಿರುವಂತೆ ತಾತ್ಪರ್ಯವಾಗುವ ಯಾವುದೇ ದಸ್ತಾವೇಜಿಗೆ ರುಜು ಮಾಡಿರುವಂತಹ ದಸ್ತಾವೇಜನ್ನು ನ್ಯಾಯಾಲಯದಲ್ಲಿ ಸುಳ್ಳೆಂದು ಸ್ಥಾಪಿಸದ ಹೊರತು ಅಥವಾ ಸ್ಥಾಪಿಸುವರೆಗೆ ಅದನ್ನು ಅಧಿನಿಯಮದ ಉಪಬಂಧಗಳ ಅನುಸಾರವಾಗಿಯೇ ಮಾಡಲಾಗಿದೆಯೆಂದು ನ್ಯಾಯಾಲಯ ತಿಳಿಯತಕ್ಕದ್ದು.

**ಉಪಸಂಹಾರ**

ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮದ ಉಪಬಂಧಗಳು ಮಗುವನ್ನು ದತ್ತಕ ತೆಗೆದುಕೊಳ್ಳಲು ಹಂಬಲಿಸುವ ಪೋಷಕರಿಗೆ ಮಾರ್ಗದರ್ಶಿಯಾಗಿವೆ ಆದರೆ ದತ್ತಕ ಸಂಬಂಧಯಾವುದೇ ವ್ಯಕ್ತಿಯು ಅಧಿನಿಯಮದ ಉಪಬಂಧಗಳನ್ನು ಉಲಂಘಿಸಿ ಯಾವುದೇ ಸಂದಾಯ ಅಥವಾ ಬಹುಮಾನವನ್ನು ಕೊಡುವುದು ಅಥವಾ ತೆಗೆದುಕೊಳ್ಳುವುದನ್ನು ಮಾಡಿದರೆ ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಅಥವಾ ಜುಲ್ಮಾನೆ ಅಥವಾ ಅವೆರಡರಿಂದಲೂ ದಂಡಿತನಾಗಬೇಕಾಗುತ್ತದೆ. ❖